**ಸಿ.ಸಿ ನಂಃ 534/2022**

**ಡಿ ಡಬ್ಲುಃ 01**

ಸಾಕ್ಷಿಯನ್ನು ದಿನಾಂಕಃ **04.07.2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಂ.ಎ.ಎನ್ ಆರೋಪಿ ವಕೀಲರಿಂದಃ**

ನಾನು ಸರ್ವೇ ನಂಬರ್ 172/3 ನೇದರ ದಿನಾಂಕಃ 27.05.2014 ರ ಬಿನಶೇತ್ಗಿ ಆದೇಶದ ಪ್ರತಿಯನ್ನು ಹಾಜರುಪಡಿಸಿದ್ದು , ಅದನ್ನು **ನಿಡಿ.1** ಎಂದು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರು ದಿನಾಂಕಃ 05.12.2014 ರ ಹೊರಡಿಸಿದ ಆದೇಶದ ಪ್ರತಿಯನ್ನು ಸರ್ವೇ ನಂಬರ್ 172/3 ನೇದರ **ನಿಡಿ.2** ಎಂದು , ಸರ್ವೇ ನಂಬರ್ 175/3 ನೇದರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು **ನಿಡಿ.3** ಎಂದು, ಸೆಂಟ್ ಮಿಲಾಗ್ರೀಸ್ ಸೊಸೈಟಿಯಲ್ಲಿ ಸಾಲದ ನಂಬರ ಎಂ.ಎಲ್-42 ನೇದಕ್ಕೆ ಸಂಬಂಧಿಸಿದಂತೆ ಸಾಲದ ಕರಾರು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು **ನಿಡಿ. 4** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ವಕೀಲರಾದ ಶ್ರೀ ಆರ್.ಎಸ್.ಹೆಚ್ ವಕೀಲರಿಂದಃ**

ನಾನು ಇಂದು ಹಾಜರುಪಡಿಸಿದ ದಾಖಲೆಗಳು ನನ್ನ ಬಿನಶೇತ್ಗಿ ಜಾಗಕ್ಕೆ ಸಂಬಂಧಿಸಿದ ದಾಖಲಾತಿಗಳು ಆಗಿರುತ್ತವೆ. ನನಗೆ ಸಂಬಂಧಿಸಿದ ಶೇತ್ಗಿ ಜಾವನ್ನು ಬಿನಶೇತ್ಗಿ ಯಾರಿ ಪರಿವರ್ತಿಸಲು ನಾನು ಸಾಕಷ್ಟು ಹಣವನ್ನು ಖರ್ಚು ಮಾಡಿರುತ್ತೇನೆ. ಜಮೀನನ್ನು ಪರಿರ್ವತನೆ ಮಾಡಲು ನನ್ನ ಬಳಿ ಇದ್ದ, ದುಡ್ಡನ್ನು ಮತ್ತು ಬೇರೆಯವರಿಂದ ಸಾಲವನ್ನು ಪಡೆದುಕೊಂಡು ಖರ್ಚು ಮಾಡಿರುತ್ತೇನೆ ಎಂದರೆ , ಸಾಕ್ಷಿ ಬ್ಯಾಂಕನಿಂದ ಸಾಲವನ್ನು ಪಡೆದುಕೊಂಡಿದ್ದೆ ಎಂದು ನುಡಿಯುತ್ತಾರೆ. ಯಾವ ಯಾವ ಬ್ಯಾಂಕಿನಿಂದ ಸಾಲವನ್ನು ಪಡೆದುಕೊಂಡಿರುತ್ತೇನೆ ಎಂದರೆ , ಸೆಂಟ್ ಮಿಲಾಗ್ರೀಸ್ ಮತ್ತು ಸ್ಟೇಟ್ ಬ್ಯಾಂಕ್ ಎಂದು ನುಡಿಯುತ್ತಾರೆ. ಯಾವ ಬ್ಯಾಂಕನಿಂದ ಎಷ್ಟು ಸಾಲವನ್ನು ಪಡೆದುಕೊಂಡಿದ್ದೀರಿ ಎಂದರೆ , ಸ್ಟೇಟ ಬ್ಯಾಂಕನಿಂದ 5,00,000/- ರೂಪಾಯಿಗಳನ್ನು ಮತ್ತು ಸೆಂಟ್ ಮಿಲಾಗ್ರೀಸ್ ಸೊಸೈಟಿಯಿಂದ 1,10,00,000/- ರೂಪಾಯಿಗಳನ್ನು ಪಡೆದುಕೊಂಡಿರುತ್ತೇನೆ.

2020 ನೇ ಇಸ್ವಿಯಲ್ಲಿ ಸೆಂಟ್ ಮಿಲಾಗ್ರೀಸ್ ಸೊಸೈಟಿಯಿಂದ 1,10,00,000/- ರೂಪಾಯಿಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ. ಹಾಗೆಯೇ ಆಗ ಇದ್ದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಿಂದ 2013-14 ನೇ ಸಾಲಿನಲ್ಲಿ 5,00,000/- ರೂಪಾಯಿಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೇನೆ. ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಈ ದಿನ ಹಾಜರುಪಡಿಸಿದ್ದೀರಾ ಎಂದರೆ, ಸೆಂಟ್ ಮಿಲಾಗ್ರೀಸ್ ಸೊಸೈಟಿಯಿಂದ ತೆಗೆದುಕೊಂಡ ಸಾಲದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ನಿಡಿ.4 ನನ್ನ ಪ್ರಕಾರ ಯಾವ ದಾಖಲೆ ಎಂದರೆ , ಸಾಲ ತೆಗೆದುಕೂಂಡ ಬಗ್ಗೆ ಮತ್ತು ಸದರಿ ಸಾಲಕ್ಕೆ ಜಾಮೀನು ಕೊಟ್ಟ ಬಗ್ಗೆ ಆಗಿರುತ್ತದೆ. ನಿಡಿ.4 ನ್ನು ಯಾವಾಗ ಪಡೆದುಕೂಂಡಿರುತ್ತೇನೆ ಎಂದರೆ ಕೇಸ್ ನಡೆಯುವಾಗ ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಸೆಂಟ್ ಮಿಲಾಗ್ರೀಸ್ ಸೊಸೈಟಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ , ಸಲ್ಲಿಸಿದ್ದೆ ಎಂದು ನುಡಿಯುತ್ತಾರೆ. ನಿಡಿ.4 ನ್ನು ಧೃಢೀಕರಿಸಿ ಕೊಟ್ಟಿರುವುದಿಲ್ಲ ಎಂದರೆ, ಅವರು ಹೇಗೆ ಕೊಟ್ಟಿದ್ದಾರೋ ನಾನು ಹಾಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದು ನನಗೆ ಗೊತ್ತಾಗಲಿಲ್ಲ. ಒಂದುವೇಳೆ ಅದು ನಿಜವಾದ ದಾಖಲಾತಿಗಳು ಆಗಿದ್ದಲ್ಲಿ ಧೃಢೀಕರಿಸಿ ಕೊಡುತ್ತಿದ್ದರು ಎಂದರೆ, ನಾನು ಕೇಳಿರುವುದಿಲ್ಲ. ಧಢೀಕೃತ ಪ್ರತಿಯನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಡಿ.4 ಈ ಪ್ರಕರಣಕ್ಕೆ ಯಾವುದೇ ರೀತಿಯ ಸಹಕಾರಿ ಆಗತಕ್ಕಂತಹ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ. ನಿಡಿ.4 ನ್ನು ನಾನು ಪಡೆದುಕೊಂಡ ನಂತರ ಸರಿಯಾಗಿ ಪರಿಶೀಲನೆ ಮಾಡಿರುತ್ತೇನೆಯೇ ಎಂದರೆ , ಪರಿಶೀಲನೆ ಮಾಡಿರುತ್ತೇನೆ. ನಿಡಿ4 ರಲ್ಲಿ ಎಷ್ಟು ಮೊತ್ತವನ್ನು ಕಾಣಿಸಿದ್ದಾರೆ

ಎಂದರೆ , 85,00,000/- ಲಕ್ಷ ಎಂದು ನುಡಿಯುತ್ತಾರೆ. ನಾನು ಸುಳ್ಳು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸ್ಟೇಟ್ ಬ್ಯಾಂಕನಲ್ಲಿ ಪಡೆದುಕೊಂಡ ಸಾಲದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆಯೇ ಎಂದರೆ , ಬ್ಯಾಂಕ್ ಮರ್ಜ ಆಗಿ ಕ್ಲೋಸ್ ಆಗಿರುವ ಕಾರಣ ದಾಖಲಾತಿಗಳು ಸಿಗುತ್ತಿಲ್ಲ ಎಂದು ನುಡಿಯುತ್ತಾರೆ . ನಾನು ಸ್ಟೇಟ ಬ್ಯಾಂಕನಲ್ಲಿ ನನಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ದಾಖಲಾತಿಗಳು ಬೇಕು ಎಂದು ಅರ್ಜಿಯನ್ನು ಸಲ್ಲಿಸಿರುತ್ತೇನೆಯೇ ಎಂದರೆ , ಮೌಖಿಕವಾಗಿ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ.4 ನಾನೆ ಸೃಷ್ಟಿಸಿಕೊಂಡ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಈ ಮೇಲೆ ಹೇಳಿದ ಬ್ಯಾಂಕುಗಳಲ್ಲಿ ಸಾಲದ ಪಾಸ್ ಬುಕಗಳನ್ನು ಹಾಜರುಪಡಿಸಿದ್ದೀನಾ ಎಂದರೆ , ಹಾಜರುಪಡಿಸಿರುವುದಿಲ್ಲ. ಸತ್ಯ ಸಂಗತಿ ಹೊರ ಬರುತ್ತದೆ ಎಂದು ನಾನು ಸದರಿ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಇಲ್ಲ. ನಿಡಿ.3 ನ್ನು ನಾನು ಯಾವ ಕಾರಣಕ್ಕಾಗಿ ಹಾಜರುಪಡಿಸಿದ್ದೇನೆ ಎಂದರೆ , ನಾನು ಮತ್ತು ರಾಚಯ್ಯ ಎನ್ನುವವರು ಶಂಭುಲಿಂಗಯ್ಯರವರು ದೈವಜ್ಞ ಕೋ ಆಪರೇಟಿವ ಸೊಸೈಟಿಯಲ್ಲಿ ತೆಗೆದುಕೊಂಡ 15,00,000/- ಸಾಲಕ್ಕೆ ಜಾಮೀನುದಾರರಾಗಿ ನಿಂತ ಬಗ್ಗೆ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ , ಇಲ್ಲ. ಸಾಕ್ಷಿ ಮುಂದುವರೆದು ಸದರಿ ಸಾಲದ ಖಾತೆ ಮುಚ್ಚಿರುವ ಕಾರಣ ಸದರಿ ದಾಖಲಾತಿಗಳನ್ನು ಒದಗಿಸಲು ಬರುವುದಿಲ್ಲ ಎಂದು ಸೊಸೈಟಿಯವರು ತಿಳಿಸಿರುತ್ತಾರೆ. ಈ ಬಗ್ಗೆ ನಾನು ಯಾವಾಗ ಸದರಿ ಸೊಸೈಟಿಗೆ ಹೋಗಿ ಲಿಖಿತವಾಗಿ ಅರ್ಜಿಯ್ನು ಸಲ್ಲಿಸಿರುತ್ತೇನೆ ಎಂದರೆ , 2022 ನೇ ಸಾಲಿನಲ್ಲಿ ಈ ಪ್ರಕರಣ ದಾಖಲಾದಾಗ ಕೇಳಿರುತ್ತೇನೆ ಎಂದು ನುಡಿಯುತ್ತಾರೆ. ಈ ಕುರಿತು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಇಲ್ಲ. ಸದರಿ ದಾಖಲಾತಿಗಳು ನನ್ನ ಬಳಿ ಇದಿದ್ದರೆ ನಾನು ಹಾಜರುಪಡಿಸುತ್ತಿದ್ದೆ ಎಂದರೆ ಸದರಿ ಸಾಲ ಮಂಜೂರು ಆಗದೇ ಇದ್ದ ಕಾರಣ ಸೊಸೈಟಿಯವರು ದಾಖಲೆಯನ್ನು ಕೊಡಲು ಬರುವುದಿಲ್ಲ ಎಂದು ತಿಳಿಸಿರುವುದಾಗಿ ನುಡಿಯುತ್ತಾರೆ. ನಾನು ಸದರಿ ದಾಖಲೆಯನ್ನು ಕೊಡುವಂತೆ ಲಿಖಿತವಾಗಿ ಕೇಳಿದ್ದು ಇರುವುದಿಲ್ಲ. ನಿಡಿ.3 ಈ ಪ್ರಕರಣಕ್ಕೆ ಯಾವುದೇ ರೀತಿಯ ಸಹಾಯಕಾರಿ ಅಲ್ಲ ಎಂದರೆ, ಸಾಕ್ಷಿ ಈ ಪ್ರಕರಣ ಅದರ ಮೇಲೆಯೇ ನಿಂತಿರುತ್ತದೆ ಎಂದು ನುಡಿಯುತ್ತಾರೆ. ನಿಡಿ.3 ರಲ್ಲಿ ರಾಚುಚಯ್ಯ ಎಂದು ನಮೂದಾಗಿದೆ ಎಂದರೆ ಸರಿ. ನಿಡಿ.3 ಕ್ಕೆ ಮತ್ತು ದೈವಜ್ಞ ಕೋ ಆಪರೇಟಿವ ಸೊಸೈಟಿ ಆದ ವ್ಯವಹಾರಕ್ಕೆ ಯಾವುದೇ ಸಂಬಂಧವಿಲ್ಲ ಎಂದರೆ , ಅದಕ್ಕೆ ಇದೊಂದೇ ಸಾಕ್ಷಿ ಎಂದು ನುಡಿಯುತ್ತಾರೆ. ಈ ಪ್ರಕರಣದಿಂದ ಹೇಗಾದರೂ ಮಾಡಿ ಬಚಾವ್ ಆಗಬೇಕೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ನ್ಯಾಯಾಲಯದಲ್ಲಿ ನನ್ನ ವಿರುದ್ಧ ಒಟ್ಟು 3 ಚೆಕ್ ಅಮಾನ್ಯ ಪ್ರಕರಣಗಳು ಇವೆ ಎಂದರೆ ಸರಿ. ನಾನು ಪಿರ್ಯಾದಿಯವರಿಂದ ಪಡೆದುಕೊಂಡ ಹಣವನ್ನು ಹಿಂತಿರುಗಿಸಲು ಭಾಧ್ಯಸ್ಥನಾಗಿರುತ್ತೇನೆ ಎಂದರೆ , ನಾನು ಅವರಿಂದ ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ. ನಾನು ಪಿರ್ಯಾದುದಾರರ ಮನೆಯನ್ನು ನೋಡಿರುತ್ತೇನೆ ಎಂದರೆ ಸರಿ. ಎಷ್ಟು ನಾನು ಅವರ ಮನೆಗೆ ಹೋಗಿರುತ್ತೇನೆ ಎಂದರೆ , ಸಾಕಷ್ಟು ಬಾರಿ ಹೋಗಿರುತ್ತೇನೆ. ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ನಾನು ಅವರ ಮನೆಗೆ ಹೋಗಿ ಬಂದು ಮಾಡುತ್ತಿದ್ದೆ ಎಂದರೆ ಸರಿ. ಪಿರ್ಯಾದಿಯವರ ಮನೆಯಲ್ಲಿ ಅವರು ತಂದೆ ಇದ್ದ ಕಾರಣಕ್ಕೆ ಅವರು ಒಟ್ಟು 6 ಜನ ಇದ್ದರು. ನನ್ನ ಶೇತ್ಕಿ ಜಮೀನನ್ನು ಪರಿವರ್ತಿಸುವ ಬಗ್ಗೆ ಪಿರ್ಯಾದಿಯವರು ಕುಟುಂಬದ ಜೊತೆ ಚರ್ಚಿಸುತ್ತಿದ್ದೆ ಎಂದರೆ ಇಲ್ಲ. ನಾನು ಪಿರ್ಯಾದಿಯವರು ಕುಟುಂಬದವರೊಂದಿಗೆ ವ್ಯವಹಾರದ ಬಗ್ಗೆ ಮತ್ತು ಜಾಗದ ಬಗ್ಗೆ ಚರ್ಚಿಸಿರುವುದಿಲ್ಲ. ನಿಪಿ.1 ನನ್ನ ಚೆಕ್ ಎಂದರೆ ಸರಿ.

ಈ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಪಿರ್ಯಾದಿಯವರು ಕೊಟ್ಟ ನೋಟಿಸ್ನು ಯಾವಾಗ ಎಂದರೆ 2022 ನೇ ಸಾಲಿನಲ್ಲಿ ಎಂದು ನುಡಿಯುತ್ತಾರೆ. ಸದರಿ ನೋಟಿಸ್ಸನಲ್ಲಿ ನಮೂದಾದ ಎಲ್ಲಾ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಹೌದು. ಸದರಿ ನೋಟಿಸ್ಸನಲ್ಲಿ ನಮೂದಾದ ವಿಷಯಗಳು ನನಗೆ ಅನ್ವಯಿಸುತ್ತದೆ

ಎಂದರೆ ಸರಿಯಲ್ಲ.  ನಿಪಿ.1 ರಲ್ಲಿ ಕಾಣುವ ಸಹಿ ನನ್ನದ್ದು ಎಂದರೆ ಸರಿ, ಆದರೆ ಬ್ಲಾಂಕ್ ಚೆಕ್  ದೈವಜ್ಞ  ಕೋ ಆಪರೇಟಿವ ಸೊಸೈಟಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.  ನಾನು ಸದರಿ ಚೆಕ್  ನ್ನು ದೈವಜ್ಞ  ಕೋ ಆಪರೇಟಿವ ಸೊಸೈಟಿಗೆ ಕೊಟ್ಟ ಬಗ್ಗೆ ನನ್ನ ಬಳಿ ದಾಖಲಾತಿಗಳು ಇದೆಯೇ ಎಂದರೆ ಇಲ್ಲ.  ನಾನು  ಸದರಿ ಚೆಕ್  ನ್ನು ದೈವಜ್ಞ  ಕೋ ಆಪರೇಟಿವ ಸೊಸೈಟಿಗೆ ಕೊಟ್ಟ ಬಗ್ಗೆ   ನನ್ನ ಮೌಖಿಕ ಹೇಳಿಕೆ ಬಿಟ್ಟರೇ ದಾಖಲಾತಿಗಳು ಇಲ್ಲ ಎಂದರೆ ಸರಿ. ಪಿರ್ಯಾದಿಯವರು ಕೊಟ್ಟ ನೋಟಿಸ್ಸಗೆ  ನಾನು ಪ್ರತ್ಯುತ್ತರವನ್ನು ನೀಡಿದ್ದೇನೆಯೇ ಎಂದರೆ ಹೌದು. ಸಾಕ್ಷಿಗೆ ಪಿರ್ಯಾದಿ ಮತ್ತು ತಾವು ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಲಾಗಿ, ಅವುಗಳಲ್ಲಿ  ಪ್ರತ್ಯುತ್ತರದ ಇದೆಯೇ ಎಂದರೆ ಇಲ್ಲ. ಪಿರ್ಯಾದಿಯು ತಮ್ಮ ನೋಟಿಸ್ಸನಲ್ಲಿ ನಮೂದು ಮಾಡಿದ ಸಂಗತಿಗಳನ್ನು ನಾನು ಒಪ್ಪಿಕೊಂಡ ಕಾರಣ ನಾನು ಪ್ರತ್ಯುತ್ತರ ನೀಡಿಲ್ಲ ಎಂದರೆ , ನಾನು ಪ್ರತ್ಯುತ್ತರವನ್ನು ನೀಡಿದ್ದೇನೆ ಎಂದು ನುಡಿಯುತ್ತಾರೆ.  ಒಂದುವೇಳೆ ಪ್ರತ್ಯುತ್ತರವನ್ನು ಕೊಟ್ಟಿದ್ದರೆ ಈ ಪ್ರಕರಣದಲ್ಲಿ ಹಾಜರುಪಡಿಸುತ್ತಿದ್ದೆ ಎಂದರೆ ಹೌದು.  ನಾನು ಸುಳ್ಳು ಕತೆಯನ್ನು ಸೃಷ್ಟಿಸಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪಿರ್ಯಾದಿಯ ಸಹೋದರಿಯರ ಮತ್ತು ಅವರ ತಾಯಿಯ ಕೆಲಸದ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ.  ಅವರ ಮಾಸಿಕ ಆದಾಯದ ಬಗ್ಗೆ ನನಗೆ ಮಾಹಿತಿ ಇತ್ತು ಮತ್ತು ಈಗಲೂ ಇದೆ ಎಂದರೆ ಸರಿ.  ಆ ಕಾರಣಕ್ಕಾಗಿ ನಾನು  ಅವರ ಮನೆಗೆ ಹೋಗಿ ಬಂದು ಮಾಡುತ್ತಿದ್ದೆ ಎಂದರೆ  , ನಾವು ಸ್ನೇಹಿತರಾದ ಕಾರಣ  ಹೋಗಿ ಬಂದು ಮಾಡುತ್ತಿದ್ದೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಪಿರ್ಯಾದುದಾರರ ಪರ ವಕೀಲರು ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು )**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

**ಸಿವಿಲ್ ಜಡ್ಜ, ಮುಂಡಗೋಡ.**